**ಓ ಎಸ್ ನಂಃ 1002/2014**
**ಡಿ ಡಬ್ಲ್ಯೂ ಃ 1**

**ದಿಃ 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಯು ಐ ವಕೀಲರಿಂದಃ**

ಈ ದಾವೆಯ ವಾದಿಗಳು ಗಾಳಿಹನುಮಯ್ಯನ ವಾರಸುದಾರರು ಎಂದರೆ ಸರಿ. ಗಾಳಿಹನುಮಯ್ಯ ಕರೆ ಹನುಮಯ್ಯನವರ ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯಲ್ಲಿ ಯಾವ ಪರಿಹಾರ ಕೋರಿರುತ್ತಾರೆ ಎಂಬುದನ್ನು ತಾವು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ದೋಳೇನಹಳ್ಳಿ ಗ್ರಾಮದ ಸರ್ವೆ ನಂ. 16/18 ರ 10 ಗುಂಟೆ ಜಮೀನು ವಾದಿ ಮತ್ತು ಪ್ರತಿವಾದಿ 1 ರಿಂದ 6 ರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ವಾದಿಗಳು ತಮ್ಮ ವಿರುದ್ಧ ಇದೆ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1004/2014 ರ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾವು ತಕರಾರು ಸಲ್ಲಿಸಿ ಸದರಿ ದಾವೆಯನ್ನು Contest ಮಾಡುತ್ತಿದ್ದೀರಿ ಎಂದರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಸದರಿ ದಾಖಲಾತಿಯು ಓ ಎಸ್ ನಂ. 1004/2014 ರಲ್ಲಿ ತಾವು ಸಲ್ಲಿಸಿರುವ ಪ್ರತಿವಾದ ಪತ್ರದ ದೃಢೀಕೃತ ನಕಲಾಗಿದ್ದು ಸದರಿ ದಾಖಲಾತಿಯನ್ನು ಸಾಕ್ಷಿಯ ಒಪ್ಪಿಗೆ ಮೇರೆಗೆ **ನಿಪಿ 40** ಎಂದು ಗುರುತಿಸಲಾಯಿತು. ಸದರಿ ಪ್ರತಿವಾದ ಪತ್ರದಲ್ಲಿ ತಾವು ದೋಳೇನಹಳ್ಳಿ ಗ್ರಾಮದ ಸರ್ವೆ ನಂ. 16/18 ರ 20 ಗುಂಟೆ ಜಮೀನು ವಾದಿ ಮತ್ತು ಪ್ರತಿವಾದಿ 1 ರಿಂದ 6 ರವರಿಗೆ ಸೇರಿದ್ದು ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಪ್ರತಿವಾದ ಪತ್ರದಲ್ಲಿ ಸದರಿ ಜಮೀನು ವಾದಿಗಳಿಗೆ ವಿಭಾಗದ ಮೂಲಕ ಬಿಟ್ಟು ಕೊಟ್ಟಿದ್ದೇವೆ ಎಂದು ಬರೆಸಲಾಗಿದೆ ಎಂದರೆ ಸರಿಯಲ್ಲ. ಚಿಕ್ಕನರಸಿಂಹಯ್ಯ ಕರೆಹನುಮಯ್ಯನವರ ವಂಶಸ್ಥರು. ದೋಳೇನಹಳ್ಳಿ ಗ್ರಾಮದ ಸರ್ವೆ ನಂ. 16/18 ರ 20 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ 1983 ನೇ ಸಾಲಿನಲ್ಲಿ ತಿಪ್ಪಗೊಂಡನಹಳ್ಳಿ ಪೋಲಿಸ್ ಠಾಣೆಯಲ್ಲಿ ತಮ್ಮ ಮೇಲೆ ಪೋಲಿಸ್ ದೂರು ದಾಖಲಾಗಿದೆ ಎಂದರೆ ಸರಿ. 1983 ನೇ ಸಾಲಿನಿಂದ ಸದರಿ ಜಮೀನಿಗೆ ಸಂಬಂಧಪಟ್ಟಂತೆ ತಾವು ವಾದಿಗಳಿಗೆ ಕಿರುಕುಳ ಕೊಡುತ್ತಾ ಬಂದಿದ್ದೀರಿ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ತಾವು ಹುಣಸೇ ಮರವನ್ನು ಕತ್ತರಿಸಿರುವ ಬಗ್ಗೆ ತಮ್ಮ ವಿರುದ್ಧ

**ಓ ಎಸ್ ನಂಃ 1002/2014**
**ಡಿ ಡಬ್ಲ್ಯೂ ಃ 1**

ಪೋಲಿಸ್ ಠಾಣೆ ಯಲ್ಲಿ ದೂರುಗಳು ದಾಖಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅಸಲು ದಾವಾ ಸಂಖ್ಯೆ 30/14 ರ ವಾದ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿದ್ದು ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಒಪ್ಪಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ **ನಿಪಿ 41** ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**